| | | |
|---|---|---|
| OS | 109/2023 | ಡಿ.ಡಬ್ಲ್ಯೂ 1 |

ಇಂದು ದಿಃ 03.02.2026. ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಪ್ರತಿ ವಾದಿಪರ ವಕೀಲರಿಂದಃ

ನನ್ನ ಮುಖ್ಯ ವಿಚಾರಣೆಯ ಬಾಬ್ತು ಪ್ರಮಾಣಪತ್ರ ಸಲ್ಲಿಸಿದ್ದು ಅದರಲ್ಲಿ ಹೇಳಿರುವ ವಿಚಾರಗಳು ಸತ್ಯವಾಗಿದ್ದು, ನಾನೇ ಹೇಳಿ ಬರೆಸಿರುತ್ತೇನೆ.

ಪಾಟೀ ಸವಾಲುಃ ವಾದಿ ಪರ ಶ್ರೀ ಕೆ ಎಸ್ ಎನ್ ವಕೀಲರಿಂದಃ

ವಾದಿಯು ದಾವೆಯಲ್ಲಿ ಹಾಜರುಪಡಿಸಿರುವ ವಂಶವೃಕ್ಷ ಸರಿ ಇರುತ್ತದೆ. ನಮ್ಮ ನಡುವೆ ಆಸ್ತಿ ವಿಭಾಗ ಆಗಿಲ್ಲ. ವಾದಿಯು ದಾವಾ ಆಸ್ತಿಯಲ್ಲಿ ಭಾಗ ಪಡೆದುಕೊಳ್ಳಲು ನನ್ನ ತಕರಾರು ಇಲ್ಲ. ನಮ್ಮ ತಂದೆ ತಾಯಿ ಮೃತರಾದ ನಂತರ ಅವರ ತಿಥಿ ಕಾರ್ಯವನ್ನು 1ನೇ ಪ್ರತಿವಾದಿಯ ಗಂಡ ಮಾಡಿದರು ಎಂದರೆ ಸರಿಯಲ್ಲ. ಅದಕ್ಕಾಗಿ ತುಂಬಾ ಹಣ ಖರ್ಚು ಮಾಡಿದರು ಎಂದರೆ ಸುಳ್ಳು. 1ನೇ ಪ್ರತಿವಾದಿಯು 4ನೇ ಐಟಂ ಮನೆಯ ರಿಪೇರಿಗೆ 7 ಲಕ್ಷ ಖರ್ಚು ಮಾಡಿರುವುದಿಲ್ಲ. ಪ್ರಭುಲಿಂಗಾರಾಧ್ಯ ಮತ್ತು ನಮ್ಮಗಳ ನಡುವೆ ರಾಜಿ ಮಾತುಕತೆಯಾಗಿರುವುದು ಸತ್ಯ ಇರುವುದಿಲ್ಲ.

ಮರುವಿಚಾರಣೆಃಇಲ್ಲ.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ನಂಜನಗೂಡು.